
32



# 3

# ಬಡವರ ಗೋಳು





ರಾಷ್ಟ್ರ ಇಂದು ಮಕ್ಕಳ ದಿನ ಆಚರಿಸುತ್ತಿರುವಾಗ ಕೊಚ್ಚಿಯಲ್ಲಿ ಕಂಡ ದೃಶ್ಯ

- ಚಿತ್ರದಲ್ಲಿ ಕಾಣುವ ಈ ಹುಡುಗರ ಸ್ಥಿತಿಗೆ ಕಾರಣಗಳೇನಿರಬಹುದು? ಊಹಿಸಿ ಲಘುಟಿಪ್ಪಣಿ ಬರೆಯಿರಿ.




# ಬಡತನದ ಬಾಳು



ಮಧ್ಯಾಹ್ನದ ಸಮಯ, ಹನ್ನೆರಡು ಗಂಟೆಯಾಗಿರಬಹುದು. ಸೂರ್ಯನ ಕಾವಿನಿಂದ ಭೂಮಿಯು ಒಡೆಯುವಂತಿದೆ! ಅಂತಹ ಬಿಸಿಲು! ಈ ವೇಳೆಯಲ್ಲಿ ಕದಿರೆಯ ತಿಮ್ಮಪ್ಪರ ಹೊಲದಲ್ಲಿ 14 ವರ್ಷದ ಕೃಶಾಂಗ ಬಾಲಕನೊಬ್ಬನು ಎರಡು ಕೋಣಗಳನ್ನು ಓಡಿಸುತ್ತಾ ಭೂಮಿಯನ್ನುಳುವುದರಲ್ಲಿ ತೊಡಗಿದ್ದನು. ಅವನ ಮೈಯು ಬೆವರಿನಿಂದ ತೊಯ್ದು ಹೋಗಿತ್ತು. ಕೆಸರಿನಿಂದ ತುಂಬಿದ ತನ್ನ ಮೈಕೈಗಳಿಂದ ಸುರಿಯುವ ಬೆವರನ್ನು ಒರಸುತ್ತಿದ್ದನು. ಹಸಿವೆಯನ್ನು ತಾಳಲಾರದೆಯೋ ಏನೋ, ಅವನು ಒಮ್ಮೊಮ್ಮೆ ತನ್ನ ಕ್ಲೇಶವನ್ನು ಮರೆಯುವುದಕ್ಕೆಂಬಂತೆ, ಹಳ್ಳಿಯ ತುಂಡು ತುಂಡು ರಾಗಗಳನ್ನು ಹಾಡುತ್ತಿದ್ದನು.

ಇದು ಹಳ್ಳಿಯ ಹುಡುಗನಾದ ಬೋರನೆಂಬ ಬಾಲಕನ ಚಿತ್ರ. ತಂದೆತಾಯಿಗಳನ್ನು ಬಾಲ್ಯದಲ್ಲೇ ಕಳೆದುಕೊಂಡಿದ್ದ ಅವನು ಧನಿಕರಾದ ತಿಮ್ಮಪ್ಪರ ಮನೆಯನ್ನು ತನ್ನ 5ನೇ ವರ್ಷ ಪ್ರಾಯದಲ್ಲೇ ಸೇರಿದ್ದನು. ಅಂದಿನಿಂದ ಇಂದಿನವರೆಗೂ ಅವನು ತಿಮ್ಮಪ್ಪರ ಮನೆಗೆಲಸಗಳಲ್ಲೇ ನಿರತನು.





ಬೋರನು ಬಹಳ ಗುಣವಂತ. ಸಹನಾಶಕ್ತಿ, ಕ್ಲೇಶಸಹಿಷ್ಣುತೆ, ಧೈರ್ಯ ಮೊದಲಾದ ಅಮೋಘ ಗುಣಗಳು ಅವನಲ್ಲಿ ಮೂರ್ತಿಮತ್ತಾಗಿದ್ದುವು. ಎಂತಹ ಕಷ್ಟದ ಕೆಲಸವೇ ಆಗಿರಲಿ, ಅದನ್ನು ತೀವ್ರ ಪ್ರಯತ್ನದಿಂದ ಸಾಧಿಸಿಯೇ ಬಿಡುವನು. ಮನೆಯ ಯಜಮಾನಿ ತಿಮ್ಮಕ್ಕೆಯೂ ತಿಮ್ಮಪ್ಪರೂ ಅವನನ್ನು ಎಷ್ಟು ಬೇಕಾದರೂ ದಣಿಸಲಿ, ಮೂರು ಮೈಲು ದೂರದಲ್ಲಿರುವ ಅಂಗಡಿಗೆ ಹೋಗಿ ಸಾಮಾನು ತರಲು ತಿಮ್ಮಪ್ಪರು ಅವನನ್ನು ಮಧ್ಯರಾತ್ರಿಯಲ್ಲೇ ಕಳುಹಿಸಲಿ, ಅವನು "ಕತ್ತಲಾಯಿತು; ಹಾದಿಯಲ್ಲಿ ಹುಲಿ ಹಾವುಗಳಿವೆ, ಹೆದರಿಕೆಯಾಗುತ್ತದೆ" ಎಂದು ಹೇಳಿದವನೇ ಅಲ್ಲ. ಅಂತಹ ಧೀರ ಪೋರನು ಬೋರ.

ರಾತ್ರಿ ಹನ್ನೊಂದು ಗಂಟೆಯ ಸಮಯ. ಮಳೆಯು ಧಾರಕಾರವಾಗಿ ಸುರಿಯುತ್ತಿತ್ತು. ಕಗ್ಗತ್ತಲೆಯೆಂದು ಬೇರೆ ಹೇಳಬೇಕಾಗಿಲ್ಲ. ಹೊಲಗದ್ದೆಗಳಲ್ಲಿ ಕಪ್ಪೆಗಳು "ಟರ ಟರ" ಎನ್ನುತ್ತಿದ್ದುವು. ಅಲ್ಲಲ್ಲಿ ನರಿ ನಾಯಿಗಳ ಊಳಾಟ ಬೊಗಳಾಟಗಳು ಕೇಳಿ ಬರುತ್ತಿದ್ದುವು.

ಇಂತಹ ಸಮಯದಲ್ಲಿ ತಿಮ್ಮಪ್ಪರ ಮನೆಯ ಬಾಗಿಲಲ್ಲಿ ಬೋರನು ತನ್ನ ಚಾಪೆಯಲ್ಲಿ ಕುಳಿತು ಏನೋ ಆಲೋಚಿಸುತ್ತಿದ್ದನು. ವಾತಾವರಣವು ಬಹಳ ಶೀತಭರಿತವಾದುದರಿಂದ ಅವನು ತನ್ನ ಒಂದು ಮೊಳ ವಸ್ತ್ರದ ತುಂಡನ್ನು ಹೊದೆದುಕೊಳ್ಳಬೇಕೆಂದು ಯತ್ನಿಸಿದನು. ಆದರೆ ಸಣ್ಣದಾಗಿದ್ದುದರಿಂದ ಅವನ ಇಡೀ ದೇಹವನ್ನು ಅದು ಮುಚ್ಚಲೊಲ್ಲದು. ಪಾಪ, ದೊಡ್ಡ ತುಪ್ಪಟವನ್ನು ಅವನಿಗೆ ಒದಗಿಸಿ ಕೊಡುವವರಾರು? ತಂದೆತಾಯಿಗಳಿರುವರೇ? ಬಂಧುಬಳಗಗಳಿರುವುದೇ? ತಿಮ್ಮಕ್ಕೆಯು ಒಳಗೆ ಮಂಚದ ಮೇಲೆ ಮಲಗಿದ್ದಳು. ಅವಳ ನಾಲ್ವರು ಗಂಡು ಮಕ್ಕಳು ತಮ್ಮ ಕೊಠಡಿಯಲ್ಲಿ ಬೆಚ್ಚನೆ ನಿದ್ರಿಸಿದ್ದರು.

ಅಂದು ತಿಮ್ಮಪ್ಪರು ಕೋಳಿಕಟ್ಟ ಉತ್ಸವಕ್ಕೆ ತನ್ನ "ಮೊಲ್ಲೆ" ಕೋಳಿಯೊಂದನ್ನು ಬೆಳಿಗ್ಗೆ 8 ಗಂಟೆಗೆ ಕೊಂಡು ಹೋದವರು ರಾತ್ರಿ ಎಷ್ಟೋ ಹೊತ್ತಿನವರೆಗೂ ಹಿಂತಿರುಗಲೇ ಇಲ್ಲ. ಅದನ್ನು ಕಂಡು ತಿಮ್ಮಕ್ಕೆಯು ಬೋರನನ್ನು ಹೊರಗೆ ಬಾಗಿಲ ಬಳಿ ಕುಳ್ಳಿರಿಸಿ, ಎಚ್ಚರಿರ ಹೇಳಿ, ಗಂಡನು ಬಂದೊಡನೆ ತನ್ನನ್ನು ಎಚ್ಚರಿಸಬೇಕೆಂದು ಆಜ್ಞಾಪಿಸಿ, ತಾನು ಸ್ವಸ್ಥಚಿತ್ತದಿಂದ ಒಳಗೆ ಮಲಗಿದಳು. ತಿಮ್ಮಕ್ಕೆಗೂ ಅವಳ ಮಕ್ಕಳುಮರಿಗಳಿಗೂ ಭೋಜನವಾಗಿಬಿಟ್ಟಿದೆ! ಬೋರನು ಇನ್ನು ತಿಮ್ಮಪ್ಪರ ಆಗಮನವಾದ ಮೇಲೆ ಅವರ ಕೆಲಸಗಳನ್ನು ಮಾಡಿ ಮುಗಿಸಿದ ನಂತರ ಊಟ ತೀರಿಸಿ ಮಲಗಬೇಕು.

ತಿಮ್ಮಪ್ಪರ ಮತ್ತು ಅವರ ಪತ್ನಿಯ ನಿತ್ಯದ ಬೆತ್ತಪೂಜೆಯು ತನ್ನ ಬಡದೇಹಕ್ಕೆ ಆಗುವುದು ಬೇಡವೆಂದು ಬೋರನು ಬಹಳ ಪ್ರಯಾಸದಿಂದ ಎಚ್ಚರವಾಗಿಯೇ ಇದ್ದನು. ಆದರೆ ಹಗಲೆಲ್ಲ ದುಡಿದ ದೇಹವವನದು. ಸೂರ್ಯನ ಪೆಟ್ಟು ತಿಂದ ಕೃಶಾಂಗನವನು. ಕೂತ ಕೂತ ಹಾಗೆಯೇ, ಅವನನ್ನು ನಿದ್ರಾದೇವಿಯು ಅಪ್ಪಿಕೊಂಡಳು. ನಿಶ್ಚಿಂತರನ್ನು ಕಂಡರೆ ನಿದ್ರಾದೇವಿಗೆ ಬಹು ಮಮತೆ.

ರಾತ್ರಿ (ಮಂಜಾನೆ)? ಎರಡು ಗಂಟೆಯು ದಾಟಿಹೋಗಿದೆ. ತಿಮ್ಮಪ್ಪರು ಏಳುತ್ತಾ, ಬೀಳುತ್ತಾ, ಕೋಳಿಯು ನಷ್ಟವಾದ ಕೋಪವನ್ನು ನುಂಗುತ್ತಾ ಕಾರುತ್ತಾ ಮದ್ಯದ ಅಮಲಿನಿಂದ ನಗುತ್ತಾ, ಅಳುತ್ತಾ, ಬೈಯುತ್ತಾ, ಪದ ಹೇಳುತ್ತಾ ಬರುತ್ತಿದ್ದರು. ತಾನೆಲ್ಲಿರುವೆನೆಂದು ಕೂಡಾ ಅವರು ಮರೆತಂತೆಯೇ ಕಂಡಿತು.

ಬೋರನು ಕನಸಿನಲ್ಲಿ ಅಳುತ್ತಿದ್ದನು. ತಿಮ್ಮಕ್ಕೆಯು ತನಗೆ ಹಿಡಿಸೂಡಿಯಲ್ಲಿ ಹೊಡೆಯುತ್ತಿದ್ದಂತೆಯೂ ಅವಳ ಮಕ್ಕಳು ಮರಿಗಳು ತನ್ನನ್ನು ಬಲವಾಗಿ ಹಿಡಿದುಕೊಂಡು ತಾವೂ ಗುದ್ದು ಹೊಡೆಯುತ್ತಿದ್ದಂತೆಯೂ ಅವನಿಗೆ ಕಾಣುತ್ತಿತ್ತು. ತಾನು ಹೊಲದಿಂದ ಸ್ವಲ್ಪ ಬೇಗ ಬಂದುಬಿಟ್ಟದ್ದಕ್ಕಾಗಿ ತಿಮ್ಮಕ್ಕೆಯು ಕೋಪಗೊಂಡು ರೌದ್ರಾವತಾರವನ್ನು

ತಾಳುವ ಮಹಾರೂಪವೂ ಅವನ ಕಣ್ಣುಮುಂದೆ ನಿಲ್ಲುತ್ತಿತ್ತು. ತಿಮ್ಮಪ್ಪರು ತನ್ನನ್ನು ಹೊಡೆಯುವುದಕ್ಕಾಗಿ ಒಳಗೆ ಮಾಡಿನ ಅಡಿಯಲ್ಲಿ ತೂರಿಸಿಟ್ಟಿದ್ದ ನಾಗರಬೆತ್ತವೂ ಬೋರನಿಗೆ ಕನಸಿನಲ್ಲಿ ಕಾಣುತ್ತಿತ್ತು. ಒಮ್ಮೆ ಆ ಬೆತ್ತವು ಬೋರನನ್ನು ನೋಡಿ, "ಪ್ರಿಯಾ ಬೋರಾ, ನಿತ್ಯದ ಮಿತ್ರನಾದ ನೀನು ಹೋಗುವೆಯಾ?" ಎಂದು ಪ್ರಶ್ನಿಸಿದಂತೆಯೂ ಭಾಸವಾಯಿತು. ಅಷ್ಟರಲ್ಲಿ "ಅಯ್ಯೋ! ಸತ್ತೆ" ಎಂಬ ಆರ್ತಧ್ವನಿಯು ಬೋರನ ಕಂಠದಿಂದ ಹಾರಿಹೋಯಿತು. ಮದ್ಯದ ಅಮಲಿನಿಂದ ಉನ್ಮತ್ತರಾಗಿ ಹೋಗಿದ್ದ ತಿಮ್ಮಪ್ಪರು ಬಾಗಿಲಿನಲ್ಲಿ ನಿಂತು, ಬೋ...... ರಾ, ಬೋ ರಾ, ಬೋ..... ರಾ ಬಾ..... ಗಿ..... ಲು ತೆಗೆ" ಎಂದರು. ಆದರೆ ಬೋರನನ್ನು ನಿದ್ರಾಂಗನೆಯು ಬಿಗಿದಪ್ಪಿಕೊಂಡಿದ್ದಳು. ತಿಮ್ಮಪ್ಪರಿಗೆ ನಿಂತುಕೊಳ್ಳಲಾಗಲಿಲ್ಲ. ಆನೆಯ ಪಾದದಂತಿದ್ದ ತನ್ನ ಪಾದವನ್ನು ಅವರು ಜಗಲಿಗಿಟ್ಟರು. ಕಾಲಿನಲ್ಲಿದ್ದ ಮೆಟ್ಟನ್ನು ಕದಲಿಸಲೂ ಇಲ್ಲ. ಕಾಲಿಟ್ಟಲ್ಲಿ ಅವರಿಗೆ ಏನೋ ತಾಗಿದಂತೆ ಭಾಸವಾಯಿತು. ಆದರೆ ಮದಿರಾದೇವಿಯು ಜಾಗೃತಳಲ್ಲವಷ್ಟೆ! ಅವರು ಬೋರನ ಕಂಠದ ಮೇಲೆ ಕಾಲಿಟ್ಟು ದೃಢವಾಗಿ ನಿಂತುಬಿಟ್ಟರು! ಮೊದಲೇ ಅನ್ನನೀರಿಲ್ಲದೆ ಕೃಶದೇಹ. ಅದರಲ್ಲೂ ತಿಮ್ಮಪ್ಪರು ಬೋರನ ಕುತ್ತಿಗೆಯನ್ನು ಮೆಟ್ಟಿ ನಿಂತಿದ್ದಾರೆ. ಮತ್ತೂ ಕರೆಯುತ್ತಾರೆ. "ಬೋರ, ಬೋರ – " – ಬೋರನಿಲ್ಲ.

ಹಾ! ಬೋರಾ ನಿನ್ನಂತಹ ಬಾಲಕರು ಹಳ್ಳಿಗಳ ಧನಿಕರ ಊಳಿಗದಿಂದ ಎಷ್ಟೊಂದು ಬಳಲುವುದಿಲ್ಲ! ಅವರನ್ನು ಕೇಳುವವರಿದ್ದಾರೆಯೇ?

**– ಎಂ. ಗೋಪಾಲಕೃಷ್ಣ ಅಡಿಗ**

- ❒ ಬೋರನ ಕಥೆಯನ್ನು ಓದಿದಿರಲ್ಲವೇ? ನಿಮ್ಮ ಒಂದು ದಿನದ ದಿನಚರಿಯನ್ನು ಬೋರನ ದಿನಚರಿಯೊಂದಿಗೆ ಹೋಲಿಸಿರಿ.
- ❒ ಬೋರನೇ ತನ್ನ ಕಥೆಯನ್ನು ಹೇಳಿಕೊಂಡಂತೆ 'ಬಡತನದ ಬಾಳು' ಕತೆಯನ್ನು ಬದಲಾಯಿಸಿ ಬರೆಯಿರಿ.
- ❒ ಬೋರನ ಸಾವಿಗೆ ಕಾರಣವಾದ ಘಟನೆಯನ್ನು ಆಧಾರವಾಗಿರಿಸಿಕೊಂಡು ಪತ್ರಿಕೆಗೆ ವಾರ್ತೆಯೊಂದನ್ನು ಸಿದ್ಧಪಡಿಸಿರಿ. ಸೂಕ್ತ ಶೀರ್ಷಿಕೆ ಕೊಡಿರಿ.

- ❒ ಕೆಳಗಿನ ಗದ್ಯಭಾಗದಲ್ಲಿ ಅಡಿಗೆರೆ ಎಳೆದ ಪದಗಳ ಸಮಾನಾರ್ಥಕ ಪದಗಳನ್ನು ಕೋಣೆಯಿಂದ ಆಯ್ದು ಬರೆಯಿರಿ.


| | | | |
|---|---|---|---|
| ದುಡಿಮೆ, | ಮಧ್ಯರಾತ್ರಿ, | ಸಹನೆ, | ಗುಣವಂತ, |
| ಕಾರ್ಯ, | ಭೀತಿ, | ಪೋರ, | ಕ್ಲೇಶ ಸಹಿಷ್ಣುತೆ. |

ಬೋರನು ಬಹಳ ಒಳ್ಳೆಯ ಸ್ವಭಾವದವನು. ತಾಳ್ಮೆ, ಸಂಕಟ ಸಹಿಸುವ ಶಕ್ತಿ ಧೈರ್ಯ ಮೊದಲಾದ ಸದ್ಗುಣಗಳು ಅವನಲ್ಲಿ ನೆಲೆನಿಂತಿದ್ದುವು. ಎಂತಹ ಕಷ್ಟದ ಕೆಲಸವನ್ನಾದರೂ ಕಠಿಣ ಶ್ರಮದಿಂದ ಮಾಡಿ ಮುಗಿಸುತ್ತಿದ್ದನು. ಯಜಮಾನನು ಅವನನ್ನು ನಡುಇರುಳು ಅಂಗಡಿಗೆ ಕಳುಹಿಸಿದರೂ ಭಯ ಪಡುವವನೇ ಅಲ್ಲ ಅಂತಹ ಧೈರ್ಯವಂತ ಹುಡುಗ ಈ ಬೋರ.



# ಬಾಲಕಾರ್ಮಿಕರು


ಬಾಲ ಸೂರ್ಯರುಗಳಿವರು
ಆದರಿವರ ಮೊಗಗಳ ಮೇಲೆ
ನಲಿಯುವುದಿಲ್ಲ
ಉದಯದ ಹೊಸರಾಗ
ಅರಳುವ ಅರುಣಛಾಯೆಯಂತೂ
ಇಲ್ಲವೇ ಇಲ್ಲ.



ಮೌನದಲಿ ಚಾ ಕುಡಿಯಲೆಂದು
ಬಂದ ನಿಮ್ಮೆದುರಿಗೆ ನಿಲ್ಲುತ್ತಾರೆ
ತೋರುತ್ತ ಮ್ಲಾನ ಮೊಗಗಳನ್ನು
ಬೀರಲಿವರ ಬಳಿ
ಹೊನ್ನ ಕಿರಣಗಳೆಲ್ಲಿಂದ ಬರಬೇಕು?
ಚಿನ್ನದಂಥ ಬಾಲ್ಯದಿಂದ
ವಂಚಿತರಿವರು.

ಕಾಣಬಹುದಿವರೆಲ್ಲೆಲ್ಲೂ
ನಾವು ನೀವು ನಿತ್ಯ ಭೇಟಿ ನೀಡುವ
ಹೋಟೆಲಿನ ಒಳಗೆ,
ರೇಲುವೇ ಸ್ಟೇಷನ್ನಿನ ಹೊರಗೆ,
ಕಾರಖಾನೆಯ ಒಳಗೆ,
ದಾರಿಗುಂಟ ಹೊರಗೆ
ಇವರು
ಗ್ರಹಣಗ್ರಸ್ತ ಸೂರ್ಯರು.

– **ಆಶಾ ಅಂಡೇಕುಳಿ**, ಬೆಂಗಳೂರು





- ❒ ಕವನವನ್ನು ಓದಿ ಆಸ್ವಾದಿಸಿರಿ.
- ❒ ಕವಯಿತ್ರಿ ಮಕ್ಕಳನ್ನು ಗ್ರಹಣಗ್ರಸ್ತ ಸೂರ್ಯನಿಗೆ ಹೋಲಿಸಲು ಕಾರಣವೇನು? ಟಿಪ್ಪಣಿ ಬರೆಯಿರಿ.
- ❒ ಬಾಲಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ನಡೆಸಲು ಉದ್ದೇಶಿಸಿರುವ ಮೆರವಣಿಗೆಯಲ್ಲಿ ಬಳಸಲು ಸೂಕ್ತವಾದ ಘೋಷಣ ವಾಕ್ಯಗಳನ್ನು ರಚಿಸಿರಿ.
- ❒ ಬಾಲಕಾರ್ಮಿಕ ಸಮಸ್ಯೆಯನ್ನು ಬಗೆಹರಿಸುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ಸೂಕ್ತ ಸಲಹೆಗಳನ್ನೊಳಗೊಂಡ ಮನವಿಪತ್ರವೊಂದನ್ನು ಬರೆಯಿರಿ.

# ಜಾತ್ರೆ


ಮುದುಕಿ ಅಮೀನಾ ತನ್ನ ಹರಕು ಗುಡಿಸಲಲ್ಲಿ ಕುಳಿತು ಅಳುತ್ತಿದ್ದಾಳೆ. ಈವತ್ತು ಈದ್ ಹಬ್ಬ. ಅವಳ ಬಳಿಯಲ್ಲಿ ಧಾನ್ಯದ ಒಂದೇ ಒಂದು ಕಾಳು ಕೂಡ ಇಲ್ಲ. ಅವಳು ನಿರಾಶೆಯಲ್ಲಿ ಮುಳುಗಿಹೋಗಿದ್ದಳು. ಯಾಕೆ ಬರಬೇಕಿತ್ತೋ ಗ್ರಹಚಾರದ ಈ ಈದ್ ಹಬ್ಬ! ಆದರೆ ಹಮೀದನ ಕತೆಯೇ ಬೇರೆ. ಯಾರಿಗೆ ಏನಾಗಿದ್ದರೆ ಅವನಿಗೇನು? ಅವನು ಸಂತಸದ ಸಾಗರದಲ್ಲಿ ತೇಲಾಡುತ್ತಿದ್ದಾನೆ. ಒಳಗೆ ಬಂದು ಅಜ್ಜಿಯನ್ನು ನೋಡಿ ಹೇಳುತ್ತಾನೆ.

“ಅಮ್ಮ, ನೀನೇನೂ ಹೆದರಬೇಡ. ಎಲ್ಲರಿಗಿಂತ ಮೊದಲು ನಾನೇ ಹಿಂತಿರುಗಿ ಬರುತ್ತೇನೆ”

ಅಮೀನಾಳ ಮನಸ್ಸು ಕಸಿವಿಸಿಯಾಗುತ್ತದೆ. ಊರಿನ ಮಕ್ಕಳೆಲ್ಲ ತಮ್ಮ ಹಿರಿಯರೊಂದಿಗೆ ಹೋಗುತ್ತಾರೆ. ಹಮೀದನ ಪಾಲಿಗೆ ತಂದೆ, ತಾಯಿ ಎಲ್ಲ ತಾನೊಬ್ಬಳೆ. ಹೇಗಪ್ಪ ಅವನನ್ನು ಒಂಟಿಯಾಗಿ ಜಾತ್ರೆಗೆ ಕಳುಹಿಸುವುದು? ಜನರ ಆ ಗದ್ದಲದಲ್ಲಿ ಮಗುವಿಗೆ ಎಲ್ಲಾದರೂ ದಿಕ್ಕುತಪ್ಪಿದರೆ ಗತಿಯೇನು? ಬೇಡ, ಅವನು ಹೋಗುವುದೇ ಬೇಡ. ಎಳೆ ಜೀವ. ಏನಾದರೂ ಅನಿಷ್ಟ ಸಂಭವಿಸಿದರೆ? ಇಷ್ಟು ಸಣ್ಣವನು ಮೂರು ಮೈಲು ನಡೆಯುವುದಾದರೂ ಹೇಗೆ? ಕಾಲಿಗೆ ಮೆಟ್ಟು ಕೂಡ ಇಲ್ಲ. ಕಾಲಿನಲ್ಲಿ ಬೊಕ್ಕೆ ಎದ್ದೀತು. ತಾನಂತೂ ಜತೆಯಲ್ಲಿ ಹೋಗುವಂತೆಯೇ ಇಲ್ಲ. ಮಧ್ಯಾಹ್ನಕ್ಕೆ ಈದ್‌ನ ಹೆಸರಿನಲ್ಲಿ ಏನಾದರೂ ತಿಂಡಿ ಮಾಡಿಡಬೇಕು. ಇದ್ದ ಸಂಪತ್ತನ್ನೆಲ್ಲ ಒಟ್ಟುಗೂಡಿಸಿದರೂ ಎಪ್ಪತ್ತೈದು ಪೈಸೆಗಿಂತ ಹೆಚ್ಚಿಲ್ಲ. ಇದರಿಂದ ಏನೇನು ಮಾಡಬಹುದು? ದೇವರೇ ಕಾಪಾಡಬೇಕು.

ಆ ಎಪ್ಪತ್ತೈದು ಪೈಸೆಯಲ್ಲಿ ಇಪ್ಪತ್ತೈದನ್ನು ಅವಳು ಹಮೀದನ ಕೈಯಲ್ಲಿಟ್ಟಳು. ಊರಿನಿಂದ ಜನರ ಮೆರವಣಿಗೆ ಹೊರಟಿತು. ಇತರ ಮಕ್ಕಳೊಂದಿಗೆ ಹಮೀದನೂ ಸೇರಿಕೊಂಡಿದ್ದ.

ಆಟಿಕೆಗಳ ನಂತರ ಮಿಠಾಯಿಗಳು, ತಿಂಡಿಗಳು. ಒಬ್ಬೊಬ್ಬನು ಒಂದೊಂದು ಬಗೆಯ ತಿಂಡಿಯನ್ನು ತೆಕ್ಕೊಳ್ಳುತ್ತಾನೆ. ಮಿಠಾಯಿ, ಹಲ್ವ, ಲಾಡು, ಖಾರಕಡ್ಡಿ ಎಂತೆಂತಹ ತಿಂಡಿಗಳಿವೆ! ತೆಕ್ಕೊಂಡು ಗಮ್ಮತ್ತಿನಿಂದ ತಿನ್ನುತ್ತಾರೆ. ಹಮೀದನೊಬ್ಬ ದೂರ ನಿಂತಿದ್ದಾನೆ. ನಿಂತು ನೋಡುತ್ತಿದ್ದಾನೆ. ಪಾಪ, ಅವನ ಹತ್ತಿರ ಇಪ್ಪತ್ತೈದೇ ಪೈಸೆ ಇದೆಯಷ್ಟೇ ಏನಾದರೂ ತೆಕ್ಕೊಂಡು ತಿನ್ನಬಹುದಾಗಿತ್ತು. ಯಾಕೆ ತಿನ್ನುವುದಿಲ್ಲ? ಬಾಯಲ್ಲಿ ನೀರು ತುಂಬಿಕೊಂಡು ಸುಮ್ಮನೆ ನಿಂತು ನೋಡುತ್ತಾನೆ.





ಮೊಹಸಿನ್ ಹೇಳುತ್ತಾನೆ : “ಹಮೀದ್, ಇಗೋ, ಜಿಲೇಬಿ ಬೇಕೇ? ಬೇಕಾದರೆ ಹಿಡಿ. ಎಷ್ಟು ರುಚಿಯಾಗಿದೆ ಗೊತ್ತೆ?”

ಇದೊಂದು ಕ್ರೂರ ವಿನೋದವೆಂದು ಹಮೀದನಿಗೆ ಸಂಶಯವಾಯಿತು. ಮೊಹಸಿನ್ ಅಷ್ಟು ಉದಾರ ಮನಸ್ಸಿನವನೇನೂ ಅಲ್ಲ. ಇಷ್ಟು ಗೊತ್ತಿದ್ದೂ ಅವನು ಮೆಲ್ಲನೆ ಮೊಹಸಿನ್ನನ ಹತ್ತಿರ ಹೋಗುತ್ತಾನೆ. ಮೊಹಸಿನ್ ಒಂದು ಜಿಲೇಬಿಯನ್ನು ತೆಗೆದು ಹಮೀದನ ಕಡೆಗೆ ಚಾಚುತ್ತಾನೆ. ಹಮೀದ್ ಕೈ ನೀಡುತ್ತಾನೆ. ಅಷ್ಟರಲ್ಲಿ ಫೊಳ್ಳೆಂದು ನಕ್ಕು ಜಿಲೇಬಿಯನ್ನು ತನ್ನ ಬಾಯೊಳಗೇ ತುರುಕಿಸುತ್ತಾನೆ. ಮಹಮ್ಮದ್ ಆಲಿ, ಸೂಫಿ ಎಲ್ಲರೂ ಕೈತಟ್ಟಿ ಬಿದ್ದು ಬಿದ್ದು ನಗುತ್ತಾರೆ. ಹಮೀದನು ಪೆಚ್ಚು ಮೋರೆ ಮಾಡಿ ತಲೆ ತಗ್ಗಿಸುತ್ತಾನೆ.

ಮೊಹಸಿನ್ : ಹಮೀದ್ ಇಲ್ಲಿ ನೋಡು. ಈ ಸಲ ಖಂಡಿತ ಕೊಡುತ್ತೇನೆ. ದೇವರಾಣೆಯಾಗಿಯೂ ಹೌದು. ಬಾ, ತೆಕೊ.

ಹಮೀದ್ : ಹೋಗೋ ಹೋಗೋ ನನ್ನ ಹತ್ತಿರ ದುಡ್ಡಿಲ್ಲಾಂತ ತಿಳಿದಿದ್ದೀಯಾ?

ಮೊಹಸಿನ್ : ಇಪ್ಪತ್ತೈದು ಪೈಸೆ ಅಲ್ಲವೇ ಇರುವುದು. ಇಪ್ಪತ್ತೈದು ಪೈಸೆಗೆ ಏನು ಸಿಗುತ್ತದೆ?

ಮಹಮ್ಮದ್ : ಹಮೀದ್, ಇಲ್ಲಿ ಬಾ. ನಿನಗೆ ಗುಲಾಬ್ ಜಾಮೂನ್ ನಾನು ಕೊಡುತ್ತೇನೆ.

ಹಮೀದ್ : ನನಗೆ ಬೇಡ. ಹಾಗೆಲ್ಲ ಸಿಹಿತಿಂಡಿಗಳನ್ನು ತಿಂದರೆ ಹೊಟ್ಟೆ ನೋವಾಗುತ್ತದೆಯಂತೆ. ಅಜ್ಜಿ ಹೇಳಿದ್ದಾರೆ.

ಮೊಹಸಿನ್ : ಅಜ್ಜಿ ಹೇಳಿದ್ದಾರೆ ಸಿಕ್ಕಿದರೆ ತಿಂದುಬಿಡಬೇಕೆಂದು. ಎಷ್ಟು ಆಸೆ ಉಂಟೋ ಏನೋ? ನಿನ್ನ ದುಡ್ಡನ್ನು ಯಾಕೆ ಬಿಚ್ಚುವುದಿಲ್ಲ?

ಮಹಮ್ಮದ್ : ಇವನ ಗುಟ್ಟು ನನಗೆ ಗೊತ್ತುಂಟು. ನಮ್ಮ ದುಡ್ಡೆಲ್ಲ ಖರ್ಚಾದ ಮೇಲೆ ನಮಗೆ ತೋರಿಸಿ ತಿಂದಾನು.



ತಿಂಡಿಗಳ ಅಂಗಡಿಸಾಲು ಕಳೆದು ಮುಂದೆ ಬಂದರೆ ಕಬ್ಬಿಣದ ಸಾಮಾನುಗಳನ್ನು ಮಾರುವ ಕೆಲವು ಅಂಗಡಿಗಳಿದ್ದವು. ಹುಡುಗರಿಗೆ ಅಲ್ಲಿ ಯಾವ ಆಕರ್ಷಣೆಯೂ ಇರಲಿಲ್ಲ. ಎಲ್ಲರೂ ಮುಂದೆ ಹೋಗುತ್ತಾರೆ. ಕಬ್ಬಿಣದ ಅಂಗಡಿಯ ಮುಂದೆ ನಿಂತು ಹಮೀದ್ ಒಂದು ಸಲ ದೃಷ್ಟಿ ಹಾಯಿಸಿದ. ಒಂದೆಡೆಯಲ್ಲಿ ಕೆಲವು ಇಕ್ಕುಳಗಳನ್ನು ಇಟ್ಟಿದ್ದರು. ಅದನ್ನು ಕಂಡೊಡನೆಯೇ ಅವನಿಗೆ ಮನೆಯಲ್ಲಿದ್ದ ಅಜ್ಜಿಯ ನೆನಪಾಯಿತು. ಮನೆಯಲ್ಲಿ ಇಕ್ಕುಳ ಇರಲಿಲ್ಲ. ಕಾವಲಿಯಿಂದ ರೊಟ್ಟಿ ಎಬ್ಬಿಸುವಾಗ ಯಾವಾಗಲೂ ಅಜ್ಜಿ ಕೈಸುಟ್ಟುಕೊಳ್ಳುತ್ತಿದ್ದಳು. ಒಂದು ಇಕ್ಕುಳ ಕೊಂಡುಹೋಗಿ ಕೊಟ್ಟರೆ ಅಜ್ಜಿಗೆ ಎಷ್ಟು ಸಂತೋಷವಾದೀತು! ಮತ್ತೆ ಅವಳು ಬೆರಳುಗಳನ್ನು ಸುಟ್ಟುಕೊಳ್ಳಬೇಕಾಗಿಲ್ಲ. ಮನೆಗೆ ಒಂದು ಒಳ್ಳೇ ಸಾಮಾನು ಬಂದ ಹಾಗೂ ಆಯಿತು. ಆಟದ ಈ ಬೊಂಬೆಗಳಿಂದ ಏನು ಪ್ರಯೋಜನ? ಸುಮ್ಮನೆ ದುಡ್ಡು ಹಾಳು ಮಾಡುವುದಷ್ಟೆ. ಮನೆಗೆ ಹೋದ ಸ್ವಲ್ಪ ಹೊತ್ತಿನಲ್ಲಿ ಅಲ್ಲಿ ಇಲ್ಲಿ ಬಿದ್ದು ಪುಡಿಪುಡಿಯಾಗಿ ಹೋಗುತ್ತವೆ. ಇಕ್ಕುಳದಿಂದಲಾದರೆ ಎಷ್ಟೆಲ್ಲ ಉಪಯೋಗವಿದೆ! ಕಾವಲಿಯಿಂದ ರೊಟ್ಟಿ ಎಬ್ಬಿಸಬಹುದು, ಕೆಂಡದ ಮೇಲೆ ಹಾಕಿ ಸುಡಬಹುದು, ಯಾರಾದರೂ ಬೆಂಕಿಬೇಕೆಂದು ಬಂದರೆ ಒಲೆಯಿಂದ ತೆಗೆದು ಅವರಿಗೆ ಕೆಂಡ ಕೊಡಬಹುದು. ಅಜ್ಜಿಯ ಹತ್ತಿರ ಬೇರೆ ದುಡ್ಡೂ ಇಲ್ಲ. ಅವಳಿಂದ ಪೇಟೆಗೆ ಬಂದು ಕೊಂಡುಕೊಳ್ಳಲೂ ಸಾಧ್ಯವಿಲ್ಲ.

ಹಮೀದನ ಜತೆಗಾರರೆಲ್ಲ ಮುಂದೆ ನಡೆದಿದ್ದರು. ಶರ್ಬತ್ತಿನ ಅಂಗಡಿಯ ಮುಂದೆ ನಿಂತು ಎಲ್ಲರೂ ಕೈಯಲ್ಲಿ ಬಣ್ಣಬಣ್ಣದ ಗ್ಲಾಸುಗಳನ್ನು ಹಿಡಿದು ಕುಡಿಯುತ್ತಿದ್ದರು. ಹಮೀದ ಯೋಚಿಸತೊಡಗಿದ – ಅಬ್ಬ! ಎಂಥ ಸ್ವಾರ್ಥಿಗಳು. ಅಷ್ಟೆಲ್ಲ ತಿಂಡಿಗಳನ್ನು ತೆಗೆದು ತಿಂದಿದ್ದಾರೆ. ಒಬ್ಬನೇ ಒಬ್ಬನಾದರೂ ಒಂದೇ ಒಂದು ಚೂರು ನನಗೆ ಕೊಡಲಿಲ್ಲ. ಹೀಗಿದ್ದೂ "ಬಾ ನನ್ನೊಟ್ಟಿಗೆ ಆಡು" ಎಂದು ನನ್ನನ್ನು ಕರೆಯುತ್ತಾರೆ. "ಅದು ಮಾಡು ಇದು ಮಾಡು" ಎಂದು ಆಗಾಗ ಕೆಲಸ ಹೇಳುತ್ತಾರೆ. ಇನ್ನು ಯಾರಾದರೂ ಕರೆಯಲಿ ನನ್ನನ್ನು. ಆಗ ಈ ಮಕ್ಕಳಿಗೆ ಹೇಳುತ್ತೇನೆ. ಹೊಟ್ಟೆ ತುಂಬ ತಿಂಡಿ ತಿಂದಿದ್ದಾರಲ್ಲ. ಒಳ್ಳೆದೇ ಆಯ್ತು. ನಾಳೆ ಮೈ ಮೇಲೆಲ್ಲ ಕಜ್ಜಿ ಬಿದ್ದಾಗ ಗೊತ್ತಾದೀತು



ಮಿಠಾಯಿಗಳ ರುಚಿ. ಪೇಟೆಯ ತಿಂಡಿ ತಿಂದರೆ ಹೊಟ್ಟೆ ಹಾಳಾಗಿ ಕಜ್ಜಿ ಆಗುತ್ತದೆಂದು ಪುಸ್ತಕದಲ್ಲಿ ಬರೆದದ್ದು ಸುಳ್ಳೇ?

ನಾನು ಮನೆಗೆ ಹೋದಾಗ ನನ್ನ ಇಕ್ಕುಳ ಕಂಡೊಡನೆಯೇ ಅಜ್ಜಿ ಸಂತೋಷದಿಂದ ಓಡಿ ಬಂದು. "ಒಳ್ಳೇ ಹುಡುಗ. ಅಜ್ಜಿಗೆಂದು ಇಕ್ಕುಳ ತಂದಿದ್ದಾನೆ" ಎಂದು ಹೇಳಿ ನನ್ನನ್ನು ಹೊಗಳುತ್ತಾಳೆ. ನೆರೆಕರೆಯವರಿಗೆಲ್ಲ ತೋರಿಸುತ್ತಾಳೆ. ಹಮೀದ್ ಇಕ್ಕುಳ ತಂದಿದ್ದಾನೆಂದು ಊರಲ್ಲೆಲ್ಲ ಸುದ್ದಿಯಾಗುತ್ತದೆ. "ಎಷ್ಟು ಒಳ್ಳೆಯ ಹುಡುಗ" ಎಂದು ಎಲ್ಲರೂ ಹೇಳುತ್ತಾರೆ. ಇವರ ಬೊಂಬೆಗಳನ್ನು ನೋಡಿ ಇವರನ್ನೆಲ್ಲ ಯಾರು ಹೊಗಳುತ್ತಾರೆ? ಹೌದು, ನನ್ನ ಹತ್ತಿರ ದುಡ್ಡಿಲ್ಲವೆಂದಲ್ಲವೆ ಈ ಮೊಹಸಿನ್, ಮಹಮ್ಮದ್ ಆಲಿ, ಸೂಫಿ, ಎಲ್ಲರೂ ನನ್ನನ್ನು ಇಷ್ಟು ಹೀಯಾಳಿಸುವುದು. ಬಡವನಾದರೇನಾಯಿತು, ನಾನು ಇವರ ಮುಂದೆ ಕೈಚಾಚಿ ಭಿಕ್ಷೆ ಬೇಡಿದ್ದೇನೆಯೇ? ಒಂದಲ್ಲ ಒಂದು ದಿನ ತಂದೆಯವರು ಖಂಡಿತ ಬಂದೇ ಬರುತ್ತಾರೆ. ಅಮ್ಮನೂ ಬರುತ್ತಾಳೆ. ಆಗ "ನಿಮಗೆ ಎಷ್ಟು ಬೊಂಬೆ ಬೇಕು. ಎಷ್ಟು ಮಿಠಾಯಿ ಬೇಕು" ಎಂದು ನಾನೇ ಇವರನ್ನು ಕೇಳುತ್ತೇನೆ. ಒಬ್ಬೊಬ್ಬರಿಗೆ ಒಂದೊಂದು ಹೆಡಿಗೆ ತುಂಬ ತೆಗೆದು ಕೊಡುತ್ತೇನೆ. ಗೆಳೆಯರಾದವರು ಹೇಗಿರಬೇಕೆಂದು ತೋರಿಸಿಕೊಡುತ್ತೇನೆ. ಐದು ಪೈಸೆ ಕೊಟ್ಟು ಜಿಲೇಬಿ ತೆಗೆಯುವುದು. ಪಾಪದವನು ಯಾರಾದರೂ ಸಿಕ್ಕಿದರೆ ತೋರಿಸಿ ತಾನೇ ತಿನ್ನುವುದು, ಹೀಗೆಲ್ಲ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ಹಮೀದನು ಯಾಕೂ ಬೇಡದ ಇಕ್ಕುಳ ತೆಕ್ಕೊಂಡಿದ್ದಾನೆಂದು ಎಲ್ಲರೂ ತಮಾಷೆ ಮಾಡಬಹುದು. ಮಾಡಿದರೆ ಮಾಡುತ್ತಿರಲಿ. ನನಗೇನು?

ಹಮೀದನು ಮೆಲ್ಲನೆ ಅಂಗಡಿಯವನ ಹತ್ತಿರ ಸರಿದು, "ಈ ಇಕ್ಕುಳಗಳು ಮಾರಾಟಕ್ಕೆ ಇಟ್ಟದ್ದೋ?" ಎಂದು ಕೇಳಿದ.

ಅಂಗಡಿಯವನು ಹಮೀದನನ್ನೊಮ್ಮೆ ತಲೆ ಎತ್ತಿ ನೋಡಿದ. ಜತೆಯಲ್ಲಿ ದೊಡ್ಡವರು ಯಾರೂ ಇಲ್ಲದ್ದನ್ನು ಗಮನಿಸಿ.

"ಇದು ನಿನ್ನಂಥವರಿಗೆ ಬೇಕಾದ್ದಲ್ಲ" ಎಂದು ಹೇಳಿದ.

"ಮಾರಾಟಕ್ಕೆ ಹೌದೋ ಅಲ್ವೋ?"

"ಅಲ್ಲದೆ ಮತ್ತೇಕೆ ಇಲ್ಲಿ ಇಟ್ಟಿರುವುದು?"


"ಹಾಗೆಂದು ಮೊದಲೇ ಯಾಕೆ ಹೇಳಲಿಲ್ಲ? ಇದರ ಕ್ರಯ ಎಷ್ಟಾಗುತ್ತದೆ?"

"ಐವತ್ತು ಪೈಸೆ"

ಹಮೀದನಿಗೆ ನಿರಾಶೆಯಾಯಿತು.

"ಕೊಡುವ ಕ್ರಯ ಹೇಳು"

"ಕೊಡುವ ಕ್ರಯವೇ? ನಲ್ವತ್ತು ಪೈಸೆಗಿಂತ ಒಂದೇ ಒಂದು ಪೈಸೆ ಕಡಿಮೆ ಇಲ್ಲ. ಬೇಕಿದ್ದರೆ ತೆಕ್ಕೊ. ಇಲ್ಲವಾದರೆ ನಡಿ ಮುಂದೆ."



ಹಮೀದನು ಎದೆ ಗಟ್ಟಿಮಾಡಿ,

“ಇಪ್ಪತ್ತೈದು ಪೈಸೆಗೆ ಕೊಡುತ್ತೀಯಾ?” ಎಂದು ಕೇಳುತ್ತ ಇಷ್ಟು ಕಡಿಮೆ ಕ್ರಯಕ್ಕೆ ಕೇಳಿದ್ದಕ್ಕೆ ಅಂಗಡಿಯವನು ಬೈದುಬಿಟ್ಟಾನೆಂಬ ಹೆದರಿಕೆಯಿಂದ ಬೇಗನೆ ಮುಂದಕ್ಕೆ ಹೆಜ್ಜೆ ಹಾಕಿದ. ಆದರೆ ಅಂಗಡಿಯವನು ಏನೂ ಹೇಳದೆ, ಅವನನ್ನು ಕರೆದು ಇಕ್ಕುಳವನ್ನು ಕೊಟ್ಟ. ಹಮೀದನು ಕೋವಿಯಂತೆ ಗಂಭೀರವಾಗಿ ಅದನ್ನು ಹೆಗಲ ಮೇಲೆ ಏರಿಸಿ ಓಡುತ್ತ ಬಂದು ತನ್ನ ಗೆಳೆಯರ ಗುಂಪನ್ನು ಸೇರಿಕೊಂಡ.

ಕಾದು ಕುಳಿತಿದ್ದ ಅಜ್ಜಿ ಅಮೀನಾ ಅವನ ಸ್ವರ ಕೇಳಿದೊಡನೆ ಓಡಿ ಬಂದು ಅವನನ್ನು ಎತ್ತಿಕೊಂಡಳು. ಕೈಯಲ್ಲಿ ಇಕ್ಕುಳವನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು.

“ಈ ಇಕ್ಕುಳ ಎಲ್ಲಿತ್ತೊ?”

“ನಾನು ಕ್ರಯ ಕೊಟ್ಟು ತಂದದ್ದು”

“ಎಷ್ಟು ಕೊಟ್ಟೆ?”

“ಇಪ್ಪತ್ತೈದು ಪೈಸೆ”

ಕೇಳಿ ಅಮೀನಾ ತಲೆ ಹೊಡಕೊಂಡಳು. ಎಂಥ ಪೆದ್ದ ಹುಡುಗ! ಬೆಳಿಗ್ಗೆ ಮನೆಯಿಂದ ಹೊರಟವನು ಮಧ್ಯಾಹ್ನದವರೆಗೆ ಉಪವಾಸ ಮಾಡಿದ್ದಾನೆ. ಏನನ್ನೂ ತಿನ್ನಲಿಲ್ಲ. ಕುಡಿಯಲಿಲ್ಲ. ಒಂದು ಇಕ್ಕುಳ ತೆಕ್ಕೊಂಡು ಬಂದಿದ್ದಾನೆ.

“ಇಡೀ ಜಾತ್ರೆಯಲ್ಲಿ ಈ ಹಾಳು ಇಕ್ಕುಳ ಬಿಟ್ಟು ಬೇರೇನೂ ಸಿಕ್ಕಲಿಲ್ಲವೇ ನಿನಗೆ?”

ಹಮೀದನು ಅಪರಾಧಿಯಂತೆ ಹೆದರುತ್ತ ಹೇಳಿದ.

“ಕಾವಲಿಯಿಂದ ರೊಟ್ಟಿ ಎಬ್ಬಿಸುವಾಗ ನಿನ್ನ ಕೈ ಬೆರಳು ಸುಡುತ್ತಿತ್ತು. ಅದಕ್ಕಾಗಿ ತಂದಿದ್ದೇನೆ”

ಈ ಮಾತನ್ನು ಕೇಳಿದೊಡನೆಯೇ ಮುದುಕಿಯ ಸಿಟ್ಟು ಕರಗಿ ನೀರಾಗಿ ಹೋಯಿತು. ಅವಳ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ. ಶಬ್ದಗಳಿಂದ ಪ್ರಕಟಿಸಬಹುದಾದ ಕೃತಕ ವಾತ್ಸಲ್ಯ ಅದಾಗಿರಲಿಲ್ಲ. ಈ ಮಗುವಿನ ಪುಟ್ಟ ಹೃದಯದಲ್ಲಿ ಎಂತಹ ತ್ಯಾಗ, ಎಂತಹ ವಿವೇಕ, ಎಂತಹ ಸದ್ಭಾವನೆ ಅಡಕವಾಗಿದೆ! ಇತರ ಹುಡುಗರು ಆಟಿಕೆಗಳನ್ನು ತೆಕ್ಕೊಂಡು ಆಡಿದಾಗ, ತಿಂಡಿ ತೆಗೆದು ತಿಂದಾಗ ಇವನ ಮನಸ್ಸು ಹೇಗಿತ್ತೋ ಏನೋ. ಇಂತಹ ಅದ್ಭುತ ಸಂಯಮ ಈ ಎಳೆ ಜೀವಿಗೆ ಎಲ್ಲಿಂದ ಬಂತು? ಆಗಲೂ ಅವನಿಗೆ ತನ್ನ ಮುದಿ ಅಜ್ಜಿ ಕೈ ಸುಟ್ಟುಕೊಳ್ಳುತ್ತಿದ್ದ ನೆನಪಾಯಿತು! ಅಮೀನಾಳ ಕಣ್ಣು ಹನಿಗೂಡಿತು. ಕುತ್ತಿಗೆ ಬಿಗಿಯಿತು.

ಹಿಂದಿ ಮೂಲ : ಪ್ರೇಮಚಂದ್

ಅನುವಾದ : ಪೆರ್ಲ ಕೃಷ್ಣ ಭಟ್



- ಈ ಕಥೆಯಲ್ಲಿ ಬರುವ ಘಟನೆಗಳನ್ನು ಕ್ರಮವಾಗಿ ಬರೆಯಿರಿ.
- ಕಥೆಯನ್ನು ನಾಟಕ ರೂಪದಲ್ಲಿ ಅಭಿನಯಿಸಿರಿ.
- ಹಮೀದನ ಮತ್ತು ಅವನ ಗೆಳೆಯರ ವರ್ತನೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅವರ ಸ್ವಭಾವಗಳನ್ನು ಹೋಲಿಸಿ ಟಿಪ್ಪಣಿ ಬರೆಯಿರಿ.
- ಬಡತನದಿಂದಾಗಿ ಉತ್ತಮ ಆಹಾರ, ಆರೋಗ್ಯ, ಶಿಕ್ಷಣ ದೊರೆಯದೆ ಬಳಲುತ್ತಿರುವ ಬಾಲಕನ ಕುರಿತಾಗಿ ಕಥೆಯೊಂದನ್ನು ರಚಿಸಿರಿ.
- ಮಕ್ಕಳನ್ನು ಸಂಪಾದನೆಗೋಸ್ಕರ ದುಡಿಸುವುದು ಸರಿಯಲ್ಲ – ಈ ವಿಚಾರದ ಬಗ್ಗೆ ಜನಜಾಗೃತಿ ಮೂಡಿಸುವ ಕರಪತ್ರ ತಯಾರಿಸಿರಿ.

❖❖❖



# ಪದಕೋಶ

## ಅ

ಅಂಗನೆ – ಹೆಂಗಸು, ಸ್ತ್ರೀ
ಅಂತಸ್ತು – ಮಹಡಿ, ಮಾಳಿಗೆ, ಅಟ್ಟ
ಅಂಧಕಾರ – ಕತ್ತಲೆ, ರಾತ್ರಿ
ಅಂಬಲಿ – ಗಂಜಿ
ಅಡಕ – ಸೇರಿದ, ಒಳಗೊಂಡ
ಅಡರು – ಏರು, ಹತ್ತು
ಅತಿಸಾರ – ಬೇಧಿ, ಹೊಟ್ಟೆಜಾಡಿಸುವ.
ಅನಾಗರಿಕ – ನಾಗರಿಕನಲ್ಲದವನು, ಅಸಭ್ಯ
ಅಪರಾಧಿ – ತಪ್ಪಿತಸ್ಥ, ದೋಷಿ
ಅಮೂಲ್ಯ – ಬೆಲೆಬಾಳುವ, ಶ್ರೇಷ್ಠ
ಅಮೋಘ – ತುಂಬ ಬೆಲೆಯುಳ್ಳ, ಯಶಸ್ವಿಯಾದ
ಅರುಣ – ಸೂರ್ಯನ ಸಾರಥಿ, ಕೆಂಪುಬಣ್ಣ
ಅವಲಂಬಿಸು – ಆಶ್ರಯಿಸು, ಅನುಸರಿಸು

## ಆ

ಆರ್ಭಟಿಸು – ಬೊಬ್ಬಿಡು, ಕಿರುಚು
ಆಹ್ವಾನ – ಆಮಂತ್ರಣ, ಕರೆ

## ಇ

ಇಳುವರಿ – ಬೆಳೆ, ಫಸಲು

## ಉ

ಉಡು – ನಕ್ಷತ್ರ
ಉದಾರ – ಶ್ರೇಷ್ಠವಾದ, ತ್ಯಾಗಶೀಲವಾದ
ಉನ್ಮತ್ತ – ಹುಚ್ಚುಹಿಡಿದ, ಕೊಬ್ಬಿದ, ಅಹಂಕಾರದ

## ಊ

ಊಳು – ಗಟ್ಟಿಯಾಗಿ ಕೂಗು, ನರಿಯ ಕೂಗು

## ಋ

ಋತು – ವರ್ಷದಲ್ಲಿ ಎರಡೆರಡು ತಿಂಗಳುಗಳ ಕಾಲದ ಅವಧಿ (ವಸಂತ, ಗ್ರೀಷ್ಮ ಇತ್ಯಾದಿ)



### ಎ

ಎಲರು – ಗಾಳಿ

### ಒ

ಒಂಟಿ – ಒಂದು, ಏಕಾಕಿ, ಒಂದು ಬಗೆಯ ಕಿವಿಯ ಆಭರಣ.

### ಕ

ಕಜ್ಜಿ – ಬೊಕ್ಕೆಯೇಳುವ ಒಂದು ಬಗೆಯ ಚರ್ಮರೋಗ

ಕದಲಿಸು – ಚಲಿಸುವಂತೆಮಾಡು, ಅಲ್ಲಾಡಿಸು

ಕಸಿವಿಸಿ – ಕಸವಿಸಿ, ಸಂಕಟ, ತಳಮಳ, ಕಳವಳ

ಕಾವು – ಬಿಸಿ, ಹಿಡಿಕೆ

ಕೂಳೆ – ಪೈರನ್ನು ಕೊಯ್ದು ಬಳಿಕ ಅದರಿಂದ ಹುಟ್ಟಿದ ಹೊಸ ಮೊಳಕೆ

ಕೃತಕ – ಮನುಷ್ಯರಿಂದ ಮಾಡಲ್ಪಟ್ಟ, ಸ್ವಾಭಾವಿಕವಲ್ಲದ

ಕೃಶಾಂಗ – ಬಡವಾದ ದೇಹ

ಕ್ಲೇಶ – ಸಂಕಟ, ಕಷ್ಟ, ದುಃಖ, ನೋವು

### ಖ

ಖಾಸಗಿ – ಸ್ವಂತದ ವೈಯಕ್ತಿಕವಾದ ಒಡೆತನದ

### ಗ

ಗಣ – ಗುಂಪು, ಹಿಂಡು

ಗರ್ಭ – ಹೊಟ್ಟೆಯ ಒಳಭಾಗ, ಬಸಿರು

ಗೋಷಾ – ಹೆಂಗಸರು ಧರಿಸುವ ಮುಸುಕು

ಗ್ರಸ್ತ – ಹಿಡಿದ, ಆವರಿಸಿದ

### ಘ

ಘೋಷ – ಪ್ರಕಟಣೆ, ಡಂಗುರ ಸಾರುವಿಕೆ

### ಛ

ಛಾಯೆ – ನೆರಳು, ಪ್ರತಿಬಿಂಬ

### ಜ



ಜರೆಯು – ನಿಂದಿಸು, ಬಯ್ಯು

### ತ

ತಂಬೆಲರು – ತಂಪಾದ ಗಾಳಿ
ತನು – ಮೈ, ಶರೀರ
ತರು – ವೃಕ್ಷ, ಮರ
ತಾಂಡವ – ಒಂದು ಬಗೆಯ ನೃತ್ಯ, ಶಿವನ ನೃತ್ಯ
ತುಪ್ಪಟ – ಗರಿ, ಪುಕ್ಕ, ಉಣ್ಣೆ
ತೇಜ – ಬೆಳಕು, ಹೊಳಪು
ತೊಡೆ – ಕಾಣದಂತೆಮಾಡು, ಅಳಿಸು
ತೊಯ್ದು ಹೋಗು – ಒದ್ದೆಯಾಗು, ನನೆಯು

### ದ

ದರ್ಪಣ – ಕನ್ನಡಿ
ದಾಹ – ಬಾಯಾರಿಕೆ, ಉರಿ, ಅತ್ಯಾಸೆ

### ನ

ನಾಮಾವಶೇಷವಾಗು – ಹೆಸರಿಲ್ಲದಾಗು, ಸಂಪೂರ್ಣ ನಾಶವಾಗು
ನಿಕಟ – ಸಮೀಪ, ಹತ್ತಿರ
ನಿಟ್ಟುಸಿರು – ದೀರ್ಘಶ್ವಾಸ, ನಿಡಿದಾದ ಉಸಿರು
ನಿದರ್ಶನ – ಉದಾಹರಣೆ, ದೃಷ್ಟಾಂತ
ನಿರ್ನಾಮ – ನಾಶ
ನಿವೇಶನ – ವಾಸಸ್ಥಳ
ನೇತ್ರ – ಕಣ್ಣು, ನಯನ
ನೊರಜುಗಲ್ಲು – ಒಂದು ಬಗೆಯ ಕಲ್ಲು

### ಪ

ಪಂಕ್ತಿ – ಸಾಲು, ಗುಂಪು, ತಂಡ
ಪಾಯ – ತಳಹದಿ, ಪಂಚಾಂಗ, ಅಸ್ತಿವಾರ



## ಬ

| | | |
|---|---|---|
| ಬಂಜರು | – | ಬೆಳೆ ಬಾರದ ನೆಲ, ಮರಳುಗಾಡು |
| ಬಣವೆ | – | ಹುಲ್ಲು, ಮೇವುಗಳ ರಾಶಿ |
| ಬೊಕ್ಕೆ | – | ಗುಳ್ಳೆ, ಮೊಡವೆ |

## ಭ

| | | |
|---|---|---|
| ಭೀತಿ | – | ಭಯ, ಹೆದರಿಕೆ |
| ಭಿನ್ನ | – | ಬೇರೆ, ಒಡೆದ |

## ಮ

| | | |
|---|---|---|
| ಮಾರಕ | – | ಹಾನಿಕಾರಕ, ಕೆಡುಕನ್ನುಂಟುಮಾಡುವ |
| ಮಾರುತ | – | ಗಾಳಿ, ವಾಯುದೇವ |
| ಮ್ಲಾನ | – | ಬಾಡಿದ, ಕಳೆಗುಂದಿದ |
| ಮೆಟ್ಟು | – | ಚಪ್ಪಲಿ, ತುಳಿಯು |
| ಮೊಗ | – | ಮುಖ, ವದನ |

## ರ

| | | |
|---|---|---|
| ರೌದ್ರ | – | ಭಯಂಕರ, ಉಗ್ರ |

## ವ

| | | |
|---|---|---|
| ವಾತ್ಸಲ್ಯ | – | ಪ್ರೀತಿ |
| ವಿಲಾಸ | – | ಭೋಗ, ವಿನೋದ, ಉಲ್ಲಾಸ, ಸೊಬಗು |
| ವಿಸ್ಮಯ | – | ಆಶ್ಚರ್ಯ |
| ವೈಷಮ್ಯ | – | ಅನ್ಯಾಯ, ಅಸಮಾನತೆ, ಹೆಚ್ಚುಕಡಿಮೆ |

## ಶ

| | | |
|---|---|---|
| ಶಂಕೆ | – | ಸಂಶಯ, ಸಂದೇಹ |
| ಶಲ್ಯ | – | ಮೈಮೇಲೆ ಹೊದ್ದ ಬಟ್ಟೆ, ತೊಗಟೆ, ಚೂಪಾದ ಆಯುಧ |



## ಸ

ಸಂಕುಲ – ಸಮೂಹ, ಗುಂಪು

ಸಂಯಮ – ಹತೋಟಿ, ಮನಸ್ಸನ್ನು ಹಿಡಿದಿಟ್ಟುಕೊಳ್ಳುವಿಕೆ

ಸಲಿಲ – ನೀರು, ಜಲ

ಸೀಮೆಗೊಬ್ಬರ – ಕೃತಕ ಗೊಬ್ಬರ

## ಹ

ಹಂದರ – ಚಪ್ಪರ, ಮಂಟಪ

ಹಳಿಯು – ಹೀಯಾಳಿಸು, ನಿಂದಿಸು

ಹಾಹಾಕಾರ – ಗೋಳಾಟ, ಪ್ರಲಾಪ

ಹೆಂಟೆ – ಮಣ್ಣಿನ ಗಟ್ಟಿ

ಹೆಡಿಗೆ – ದೊಡ್ಡ ಬುಟ್ಟಿ, ಬಿದಿರ ಬುಟ್ಟಿ

❖❖❖

